2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮರಿಗೌಡ | | ಪಿಡಬ್ಲ್ಯೂ - 5 |
| ತಂದೆಯ ಹೆಸರು | - ಕರಿಗೌಡ | | ಸಿಡಬ್ಲ್ಯೂ - 6 |
| ವಯಸ್ಸು | - 51 ವರ್ಷ | | |
| ಉದ್ಯೋಗ | - ವ್ಯಾಪಾರ | | |
| ವಾಸ ಸ್ಥಳ | - ಗೌಡನಹಳ್ಳಿ, ಚಿಕ್ಕಮಗಳೂರು ತಾಃ | | |

ದಿನಾಂಕಃ 24-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(4 ನೇ ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ)

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿ ಇರುವ ದಾಖಲೆಯು ಪೊಲೀಸರು ಮಹಜರ್ ಗಾಗಿ ಬರಲು ನೀಡಿದ ನೋಟೀಸು ಆಗಿದ್ದು ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.
2. ಸದರಿ ನೋಟೀಸ್ ನ್ನು ನನಗೆ ದಿಃ 22.10.2017 ರಂದು ಮಧ್ಯಾಹ್ನ 12.00 ಗಂಟೆಗೆ ಪೊಲೀಸರು ನನಗೆ ನೀಡಿರುತ್ತಾರೆ. ಕಾವ್ಯಶ್ರೀ ಮತ್ತು

ಆರೋಪಿಗಳ ನಡುವೆ ಗಲಾಟೆ ವಿಚಾರವಾಗಿ ಕೃತ್ಯ ಸ್ಥಳವಾದ ಲಕ್ಷ್ಮೀಶನಗರಕ್ಕೆ ಬಂದು ಪಂಚರಾಗಲು ಕೇಳಿಕೊಂಡ ಮೇರೆಗೆ ಸ್ಥಳಕ್ಕೆ ನಾನು 12.00 ಗಂಟೆಗೆ ಹೋಗಿರುತ್ತೇನೆ. ಸ್ಥಳಕ್ಕೆ ನಾನು ಮತ್ತು ಲಕ್ಷ್ಮಣಗೌಡ ಹೋಗಿರುತ್ತೇವೆ. ಲಕ್ಷ್ಮೀಶನಗರದ 1 ನೇ ಕ್ರಾಸ್ ನಲ್ಲಿ 3 ನೇ ಆರೋಪಿ ಹುಚ್ಚೇಗೌಡರ ಮನೆಗೆ ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳದಲ್ಲಿ ಕಾವ್ಯಶ್ರೀ ಇವರು ಪೊಲೀಸರಿಗೆ ಸ್ಥಳ ತೋರಿಸಿ ಒಂದು ಮೊಬೈಲ್ ಚಾರ್ಜರ್ ವೈರು, ಒಂದು ಕಪ್ಪು ಹಿಡಿ ಇರುವ ಚಾಕು, ಇವುಗಳನ್ನು ಪೊಲೀಸರ ಮುಂದೆ ಹಾಜರು ಪಡಿಸಿ ಚಾಕುವಿನಿಂದ ತನಗೆ ಬರೆ ಹಾಕಿದರು ಮತ್ತು ಮೊಬೈಲ್ ಚಾರ್ಜರ್ ವೈರ್ ನಿಂದ ಕುತ್ತಿಗೆಗೆ ಬಿಗಿದಿದ್ದರು ಎಂದು ಹೇಳಿ ಹಾಜರು ಪಡಿಸಿರುತ್ತಾರೆ. ಸದರಿ ವಸ್ತುಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡು ಸದರಿ ಚಾರ್ಜರ್ ವೈರ್ ನ್ನು ಮತ್ತು ಚಾಕುವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಸದರಿ ಸ್ಥಳದಲ್ಲಿ ಮಹಜರ್ ನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆ ವರೆಗೆ ಮಾಡಿದ್ದು, ಅದಕ್ಕೆ ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಸಹಿಯನ್ನು ಲಕ್ಷ್ಮಣಗೌಡ ಎಂಬುವವರು ಸಹ ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.12 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು.

3. ಈಗ ಸಾಕ್ಷಿಯು ಸದರಿ ಮಹಜರ್ ನಡಿ ಅಮಾನತ್ತು ಪಡಿಸಿಕೊಂಡ ಮೊಬೈಲ್ ಜಾರ್ಜರ್ ವೈರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದು Microsoft ಕಂಪನಿಯದ್ದು ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಮೊಬೈಲ್ ಜಾರ್ಜರ್ ವೈರ್ ನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಚಾಕುವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸದರಿ ಮು.ಮಾ.1 ಮತ್ತು 2 ಇವುಗಳು ಇದ್ದ ಬಟ್ಟೆಯ ಮೇಲೆ ಅಂಟಿಸಲಾದ ಚೀಟಿಯ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ವಿ.ಟಿ.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

4. ನಾನು 8 ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. English ಸ್ವಲ್ಪ ಸ್ವಲ್ಪ ಬರುತ್ತದೆ. ಬಸವೇಗೌಡ ಬಿನ್ ಸಿದ್ದೇಗೌಡ, ಕೋಟೆ ಇವರು ನನ್ನ ಸ್ನೇಹಿತರು ಎಂದರೆ ಸರಿ. ಸದರಿ ಬಸವೇಗೌಡ ಇವರ ಅಕ್ಕ ಮಂಜುಳಾ ನನಗೆ ಗೊತ್ತಿಲ್ಲ. ನಾನು ಸದರಿ ಬಸವೇಗೌಡ ಇವರ ಮನೆಗೆ ಹೋಗಿರುವುದಿಲ್ಲ ಅವರು ನಮ್ಮ ಅಂಗಡಿಗೆ ಬಾಳೆ ವ್ಯಾಪಾರಕ್ಕಾಗಿ ಬರುತ್ತಿದ್ದರಿಂದ ಅವರು ನನಗೆ ಸ್ನೇಹಿತರಾಗಿರುತ್ತಾರೆ. ಬಸವೇಗೌಡ ರವರು ನನ್ನನ್ನು ಪಂಚರಾಗಿ ಕರೆದುಕೊಂಡು ಹೋಗಿದ್ದರು ಎಂದರೆ ನನ್ನ ಬಾಳೆ ಹಣ್ಣಿನ ಅಂಗಡಿ ಟೌನ್ ಪೊಲೀಸ್ ಠಾಣೆಯ ಹತ್ತಿರ ಇರುವುದರಿಂದ ನನ್ನನ್ನು ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ. ನನ್ನ ಬಾಳೆ

ಹಣ್ಣಿನ ಅಂಗಡಿ ಮಾರ್ಕೇಟ್ ರಸ್ತೆಯಲ್ಲಿ ಇರುತ್ತದೆ. ಟೌನ್ ಪೊಲೀಸ್ ಠಾಣೆ ಮಾರ್ಕೇಟ್ ರಸ್ತೆ ಗೆ ಶಿಫ್ಟ್ ಆಗಿ 3 ವರ್ಷ ಆಗಿರುತ್ತದೆ. ನಮ್ಮ ಬಾಳೆ ಹಣ್ಣಿನ ಅಂಗಡಿಗೆ ನಗರಸಭೆಯಿಂದ ಅನುಮತಿ ಪಡೆದುಕೊಂಡಿರುತ್ತೇವೆ. ನನ್ನ ಬಾಳೆ ಹಣ್ಣಿನ ಅಂಗಡಿಯ ಅನುಮತಿ ಪತ್ರವನ್ನು ಪೊಲೀಸರಿಗೆ ನೀಡಿರುವುದಿಲ್ಲ ಮಹಜರ್ ನಲ್ಲಿ ನಾನು ನನ್ನ ವಿಳಾಸ ಮಾರ್ಕೇಟ್ ರಸ್ತೆಯಲ್ಲಿ ಇರುವ ಟೌನ್ ಪೊಲೀಸ್ ಠಾಣೆ ಪಕ್ಕ ಎಂದು ತೋರಿಸಿರುವುದಿಲ್ಲ ಎಂದರೆ ಸರಿ.

5. ನನಗೆ ಪೊಲೀಸರು ಆ ದಿನ ನೋಟೀಸು ನೀಡಿದ್ದು ಅದನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ನಿ.ಪಿ.14 ನೋಟೀಸ್ ನ್ನು ನನಗೆ ಪೊಲೀಸರು ನನ್ನ ಅಂಗಡಿಯ ಹತ್ತಿರ ನೀಡಿರುತ್ತಾರೆ. ನನಗೆ ಪೊಲೀಸರು ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ ಆ ಕಾರಣಕ್ಕಾಗಿ ನಾನು ಅದನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಮಾರು ಪ್ರಕರಣಗಳಲ್ಲಿ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

6. ನನಗೆ ಆ ದಿನ ಪೊಲೀಸರು ಬೆಳಿಗ್ಗೆ 10.30 ಗಂಟೆಗೆ ನೋಟೀಸು ನೀಡಿರುತ್ತಾರೆ. ನಾನು ನನ್ನ ಅಂಗಡಿಯನ್ನು ಬೆಳಿಗ್ಗೆ 7.00 ಗಂಟೆಗೆ ತೆರೆಯುತ್ತೇನೆ. ನಿ.ಪಿ.14 ನೋಟೀಸ್ ಗೆ ನಾನು 3 ನೇ ಆರೋಪಿ ಹುಚ್ಚೇಗೌಡರ ಮನೆಯಲ್ಲಿ ಮಾಡಿರುತ್ತೇನೆ. ನನಗೆ ಪೊಲೀಸರು ಮಹಜರ್ ಗಾಗಿ ಬರಲು ಯಾವುದೇ ನೋಟೀಸು ನೀಡಿರುವುದಿಲ್ಲ, ಯಾವುದೇ ಮಹಜರ್ ನ್ನು ನನ್ನ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಸವೇಗೌಡರ ಭಾವ ರಾಜೇಗೌಡ ಮತ್ತು

ಅವರ ಮಗಳಿಗೆ ಈ ಪ್ರಕರಣದಲ್ಲಿ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿ ತಂದೆ ರಾಜೇಗೌಡರ ಇವರು ನಗರ ಠಾಣೆಯಲ್ಲಿ ಪೊಲೀಸರಾಗಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪಿರ್ಯಾದಿ ಕಾವ್ಯಶ್ರಿ, ಅವರ ತಂದೆ ರಾಜೇಗೌಡ ಮತ್ತು ಅವರ ತಾಯಿ ಮಂಜುಳಾ ಇವರು ನನಗೆ ಮೊದಲಿನಿಂದಲು ಪರಿಚಯವಿದ್ದು ಇದರ ಬಗ್ಗೆ ಸತ್ಯ ಹೇಳಿದರೆ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಅವರು ನನಗೆ ಪರಿಚಯ ಇರುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

7. ಸ್ಥಳದಲ್ಲಿ ಮಹಜರ್ ಮಾಡಿದ್ದು ಅದರ ಚಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಸ್ಥಳಕ್ಕೆ ಮಹಜರ್ ಗಾಗಿ ಹೋಗದೇ ಇರುವುದರಿಂದ ನನಗೆ ಸದರಿ ಸ್ಥಳದ ಚಕ್ಕುಬಂದಿ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಚಾರ್ಜರ್ ವೈರ್ ಮತ್ತು ಮು.ಮಾ.2 ಚಾಕು ಇವುಗಳನ್ನು ಪಿರ್ಯಾದಿ ಕಾವ್ಯಶ್ರೀ ಆ ದಿನ ಹಾಜರು ಪಡಿಸಿರುತ್ತಾರೆ. ಸದರಿ ಮು.ಮಾ.1 ಮತ್ತು 2 ಇವುಗಳನ್ನು ವೃತ್ತ ನಿರೀಕ್ಷಕರ ಮುಂದೆ ಹಾಜರು ಪಡಿಸಿರುತ್ತಾರೆ. ಮು.ಮಾ.1 ಮತ್ತು 2 ಇವುಗಳನ್ನು ನಾನು ಬಸವೇಗೌಡರ ಸ್ನೇಹಿತನಾಗಿದ್ದು , ಅವರ ನೆಂಟರಾದ ಪಿರ್ಯಾದಿ ಕಾವ್ಯಶ್ರೀ ಮತ್ತು ಅವರ ತಂದೆ ರಾಜೇಗೌಡ ಇವರಿಗೆ ಸಹಾಯ ಮಾಡಲು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ, ಹಾಗಾಗಿಯೇ ನಾನು ಮಹಜರ್ ಕಾಲದಲ್ಲಿ ಇದ್ದೆನು ಎಂಬುದಕ್ಕೆ ಯಾವುದೇ ಪೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಪೊಲೀಸ್ ಠಾಣೆಯಲ್ಲಿಯೇ ಮಾಡಿ ಮು.ಮಾ.1

ಮತ್ತು 2 ಇವುಗಳನ್ನು ಠಾಣೆಯಲ್ಲಿಯೇ ಪಡೆದುಕೊಂಡಿದ್ದರಿಂದ ಅವುಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡ ಬಗ್ಗೆ ನನ್ನ ಮತ್ತು ಮಹಜರ್ ಕಾಲಕ್ಕೆ ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ಪಿರ್ಯಾದಿ ಮತ್ತು ಪಿರ್ಯಾದಿ ಕುಟುಂಬದವರ ಜೊತೆ ಸೇರಿಕೊಂಡು ಯಾವುದೇ ವಸ್ತುಗಳನ್ನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಳ್ಳದಿದ್ದರು ಸಹ, ಮು.ಮಾ.1 ಮತ್ತು 2 ಇವುಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆಂದು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.